Service Co-operative Society at Honnalgere, Maddur Taluk.

*Q.—175. Sri K. LAKKAPPA (Hebbur) [on behalf of SRI S. M. KRISHNA (Maddur)].—

Will the Government be pleased to state :—

(a) whether the Service Co-operative Society at Honnalgere, Maddur Taluk, is functioning ;

(b) what is the short term loan advanced to the share holders of the Society last ;

(c) what is the amount recovered so far ;

(d) the steps taken by the Department of Co-operation for the recovery of the outstanding amount ;

(e) whether complaints have been received by the share holders about the misappropriation of the Society funds by the office bearers of Society ?

A.—Sri KONDAJJI BASAPPA (Deputy Minister for Co-operation).—

(a) Yes.

(b) Rs. 56,600.

(c) Rs. 29,885.

(d) The Society has been advised to file disputes in respect of defaulters.

(e) No.

ಶ್ರೀ ಕೆ. ಲಕ್ಕಪ್ಪ.—ಈ ಸಹಕಾರ ಸಂಘಕ್ಕೆ 56,600 ರೂಪಾಯಿಗಳನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ಇದುವರೆಗೂ ಇದರಲ್ಲಿ ಎಷ್ಟು ಹಣ ವಸೂಲಾಗಿದೆ ? ಹಾಗೆ ವಸೂಲು ಮಾಡದೆ ಇರಲು ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—1961-62ನೇ ಸಾಲಿನಲ್ಲಿ ಇದನ್ನು ಕೊಟ್ಟದ್ದು. ಇದುವರೆಗೂ ವಸೂಲಾಗಿಲ್ಲ ಎಂದೇನಲ್ಲ. ಡಿಸ್‌ಪ್ಯೂಟ್ಸ್‌ಗಳನ್ನು ಫೈಲ್ ಮಾಡಲಾಗಿದೆ. ಅಲ್ಲದೆ ಷಾರ್ಟ್ ಟರ್ಮ್ ಲೋನುಗಳನ್ನು ಕೊಡುವುದನ್ನು ನಿಲ್ಲಿಸಲಾಗಿದೆ ಎಂದು ನಮಗೆ ರಿಪೋರ್ಟ್ ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಇದರಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದರಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ಅನೇಕ ದೂರುಗಳು ಸಹಕಾರ ಸಂಘಗಳ ಮೇಲೆ ಬಂದು ಅವು ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದರೂ ಕೂಡ ಅವು ಸರಿಯಾಗಿ ನಡೆಯುತ್ತಿವೆ ಮತ್ತು ಯಾವ ನಿರ್ದಿಷ್ಟವಾದ ದೂರುಗಳೂ ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುವುದು ಸರಿಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ದೂರುಗಳೇನೂ ಕೊಟ್ಟಿಲ್ಲ. ಸರಿಯಾಗಿ ಆಡಿಟ್ಟು ಆಗದೆ ನಮಗೆ ರಿಪೋರ್ಟ್ ಬರುವವರೆಗೆ ನಾವು ಯಾವ ತರಹದ ಸಲಹೆಯನ್ನೂ ಕೊಡುವುದಕ್ಕೆ ಆಗುವುದಿಲ್ಲ. ಹೊಸದಾಗಿ ಸಹಕಾರ ಸಂಘಗಳಿಗೆ ಯಾವ ವಿಧವಾದ ಸಹಾಯವನ್ನೂ ಕೊಟ್ಟಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಚೆಗೆ ಸರಕಾರದಿಂದ ಬಂದ ಒಂದು ಆಜ್ಞೆಯ ಪ್ರಕಾರ ಸಹಕಾರ ಸಂಘಗಳವರು ರೈತರಿಗೆ ಸಾಲವನ್ನು ಕೊಟ್ಟು ಅದರಲ್ಲಿ, ಬಾಕಿ ವಸೂಲು ಆಗಿರುವುದು ಮೂರನೇ ಒಂದು ಭಾಗದಷ್ಟು ವಸೂಲಾಗಿದ್ದರೆ ಅಂತಹವರಿಗೆ ಮೂರು ತಿಂಗಳ ಅವಧಿಯಷ್ಟು ಕಾಲಾವಕಾಶ ಕೊಡಬಹುದು ಎಂದು ಹೇಳಲಾಗಿದೆ. ಆದರೆ ರೈತರು ಮೂರು ತಿಂಗಳ ಕಾಲದಲ್ಲಿ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ರಿಜಿಸ್ಟ್ರಾರ್‌ರವರ ಬಳಿಗಾಗಲೀ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಬಳಿಗಾಗಲೀ ಹೋಗಿ ಅರ್ಜಿ ಕೊಡಬೇಕು ಎಂದರೆ ಬಹಳ ಕಷ್ಟ. ಇದಕ್ಕೆ ಬದಲಾಗಿ ಸ್ಥಳದಲ್ಲಿರುವ ಇನ್ಸ್‌ಪೆಕ್ಟರವರಿಗೇನೇ ಈ ಅಧಿಕಾರ ವನ್ನೀಡಿಕೆ ಕೊಡಬಾರದು ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ನಭೆಯ ಗಮನಕ್ಕೆ ನಾವು ಸೊಸೈಟಿಗಳ ಮೇಲೆ ದೂರುಗಳನ್ನು ತಂದು ಹೇಳಿದ ಮೇಲೆ ಅಲ್ಲವೇ ಈಗ ಡಿಸ್‌ಪ್ಯೂಟುಗಳು ಫೈಲಾಗಿವೆ ಎಂದು ಹೇಳುತ್ತಿದ್ದೀರಿ ?

Sri KONDAJJI BASAPPA.—In fact, the Assistant Registrar of Co-operative Societies has insisted long back and they have filed disputes during the previous year.

ಶ್ರೀ ಅಂದಾನಯ್ಯ.—ವರ್ಷವರ್ಷವೂ ಎಲ್ಲ ಸೊಸೈಟಿಗಳ ರೆಕ್ಕಪತ್ರಗಳೂ ಆಡಿಟ್ಟು ಆಗುತ್ತಿಪೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆಡಿಟ್ಟು ಮಾಡುತ್ತಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ, ಆಡಿಟ್ಟು ನುಮಾರು ಮೂರು ವರ್ಷಗಳಿಂದ ಮಾಡಿಯೇ ಇರಲಿಲ್ಲ. ಅಲ್ಲದೆ 800 ರೂಪಾಯಿಗಳಷ್ಟು ಅಲ್ಲಿರುವ ಕಾರ್ಯದರ್ಶಿಗಳ ಹೆಸರಿನಲ್ಲಿ ವಸೂಲಾಗಬೇಕೆಂದು ಇತ್ತು. ಅದರಲ್ಲಿ 700 ರೂಪಾಯಿಗಳನ್ನು ಅವರಿಂದ ವಸೂಲು ಮಾಡಲಾಗಿದೆ ಮತ್ತು ಇನ್ನುಳಿದ ಒಂದು ನೂರು ರೂಪಾಯಿಗಳಿಗೆ ಅವರು ಖರ್ಚು ಮಾಡಿರುವ ಕೆಲಸಕ್ಕೆ ಒಂದು ಪೋಚರು ಕೂಡ ಕೊಟ್ಟಿದ್ದಾರೆಂದು ವರದಿ ನಮಗೆ ಬಂದಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸಾಲ ತೆಗೆದುಕೊಂಡವರ ಹೆಸರಿನಲ್ಲೇ ಸಾಲ ಕೊಡುತ್ತಿದ್ದಾರೋ ಅಥವಾ ಹೆಸರೇ ಇಲ್ಲದೆ ಸಾಲಗಳನ್ನು ಕೊಡುತ್ತಿದ್ದಾರೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಸಾಲ ಕೊಡುವಾಗ ಸರಿಯಾದ ಹೆಸರಿದ್ದರೇನೇ ಕೊಡುವುದು, ಇಲ್ಲದಿದ್ದರೆ ಕೊಡುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಸಹಸ್ರಾರು ಸಹಕಾರ ಸಂಘಗಳಲ್ಲಿ ಕೊಟ್ಟ ಹಣವೇ ವಸೂಲಾಗದೇ ಇರುವುದರಿಂದ ಅದನ್ನು ಸೂಪರ್‌ಸೀಡ್ ಮಾಡಲು ಏಕೆ ತಕ್ಕ ಕ್ರಮವನ್ನು ಕೈಗೊಳ್ಳಬಾರದು ?

ಶ್ರೀ ಕೊಂಡಜ್ಜಿ ಬಸಪ್ಪ.—ಸಾಲದ ಹಣ ವಸೂಲಾಗದೇ ಇದ್ದರೆ ಡಿಫಾಲ್ಟರುಗಳಿಗೆಲ್ಲಾ ಷೋಕಾಸು ನೋಟೀಸು ಕೊಟ್ಟು ಅನಂತರ ಮ್ಯಾನೇಜಮೆಂಟನವರಿಗೂ show cause notice ಕೊಟ್ಟು ಅವರಿಂದ ಉತ್ತರ ಪಡೆದು, ಉತ್ತರಗಳು ಸಮರ್ಪಕವಾಗಿಲ್ಲದಿದ್ದಲ್ಲಿ ಸೂಪರ್‌ಸೀಡ್ ಮಾಡಬೇಕಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಯಾವ ವರ್ಷದಲ್ಲಿ ಈ ಸಹಕಾರ ಸಂಘಕ್ಕೆ ಹಣವನ್ನು ಕೊಡರಾಯಿತು ?

ಶ್ರೀ ಕೊಂಡಜ್ಜಿ ಬಸಪ್ಪ.—1961-62ರಲ್ಲಿ.

Movement of Wheat Flour from Madras State to Mysore State.

*Q.—187. Sri C. S. HULKOTI (Mundargi).—

Will the Government be pleased to state :—

(*a*) (i) whether wheat flour or other products of wheat are allowed to have free movement from the Madras State to Mysore State without any allotment or permit, or (ii) whether its movement is restricted and controlled ;

(*b*) whether the said wheat flour or its products are allowed to be sold in the open market ;

(*c*) whether its rate is controlled or not ;

(*d*) if controlled what is the rate fixed by the Government ;

(*e*) whether it is sold in the bazaar as per controlled rate ;